# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** DBOTಯಡಿಯಲ್ಲಿ ಕೈಗೆತ್ತಿಕೊಳ್ಳಲಾದ ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕಿನ 166 ಗ್ರಾಮಗಳಿಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ PMC ಸೇವಾ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ :**

1. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರರವರು ಆರ್ವಿ ಅಸೋಸಿಯೇಟ್ಸ್, ರಾಹುಲ ರೆಸಿಡೆನ್ಸಿ, ಶ್ರೀನಗರ ಕಾಲೋನಿ ಮುಖ್ಯ ರಸ್ತೆ, ಹೈದ್ರಾಬಾದ್‌ರವರ ಜೊತೆ ಮಾಡಿಕೊಂಡಿರುವ PMC ಕರಾರು ಒಡಂಬಡಿಕೆ ಪತ್ರ ದಿನಾಂಕ:11.11.2014.
2. ಆರ್ವಿ ಅಸೋಸಿಯೇಟ್ಸ್, ರಾಹುಲ ರೆಸಿಡೆನ್ಸಿ, ಶ್ರೀನಗರ ಕಾಲೋನಿ ಮುಖ್ಯ ರಸ್ತೆ, ಹೈದ್ರಾಬಾದ್-500082ರವರ ಪತ್ರ ದಿನಾಂಕ:18.04.2016.
3. ಕಾರ್ಯಪಾಲಕ ಇಂಜಿನಿಯರ್, RDW&SD ಚಾಮರಾಜನಗರರವರ ಪತ್ರ ಸಂಖ್ಯೆ:EE/RDW&SD/CH-Nagar/2016-17, ದಿನಾಂಕ:30.04.2016.
4. ಮುಖ್ಯ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲ್ಲೂಕುಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಪಿ.ಎಂ.ಸಿಯ ಮೂರನೇ ಪಾರ್ಟಿ) ಸೇವಾ ಅವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ ನಡೆದ ಸಭಾ ನಡವಳಿಗಳು.
5. ಆರ್ವಿ ಅಸೋಸಿಯೇಟ್ಸ್, ರಾಹುಲ ರೆಸಿಡೆನ್ಸಿ, ಶ್ರೀನಗರ ಕಾಲೋನಿ ಮುಖ್ಯ ರಸ್ತೆ, ಹೈದ್ರಾಬಾದ್-500082 ರವರ ಪತ್ರ ಸಂಖ್ಯೆ:AA/PMC-CRN/2016-17/1749/19, ದಿನಾಂಕ:07.06.2016.
6. ಕಡತ ಸಂಖ್ಯೆ:RDP 428 RDW&SD 2016ರಲ್ಲಿ ಮುಖ್ಯ ಇಂಜಿನಿಯರ್‌ರವರ ಟಿಪ್ಪಣಿ.
7. ಸರ್ಕಾರದ ಟಿಪ್ಪಣಿ ಸಂಖ್ಯೆ:FD 921 Exp-12/2016, ದಿನಾಂಕ:10.11.2016.

---

**ಪೀಠಿಕೆ:**

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮಳೆಯ ವೈಫಲ್ಯದಿಂದ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿತ ಕಂಡಿದ್ದು, ಇದರಿಂದಾಗಿ ಅಂತರ್ಜಲ ಆಧಾರಿತ ಕುಡಿಯುವ ನೀರು ಸರಬರಾಜು ಯೋಜನೆಗಳು ವಿಫಲಗೊಳ್ಳುತ್ತಿದ್ದು, ತೀವ್ರ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಬರಪೀಡಿತವೆಂದು ಘೋಷಿಸಲಾದ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ 166 ಗ್ರಾಮಗಳಿಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಶುದ್ಧ ಕುಡಿಯುವ ನೀರನ್ನು ಶಾಶ್ವತವಾಗಿ ಒದಗಿಸುವ ಸಲುವಾಗಿ 2 ಬಹುಗ್ರಾಮ ಯೋಜನೆಗಳನ್ನು ರೂ.292.08ಕೋಟಿ ಹಾಗೂ ರೂ.205.00ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಟೆಂಡರ್ ಮೂಲಕ ಯಶಸ್ವಿ ಗುತ್ತಿಗೆದಾರರಾದ ಮೆ॥ ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಸಂಸ್ಥೆಗೆ ದಿನಾಂಕ:03.03.2014ರಂದು ವಹಿಸಿಕೊಡಲಾಯಿತು. ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿಯನ್ನು ದಿನಾಂಕ:02.03.2017 ಎಂದು ನಿಗದಿಪಡಿಸಲಾಯಿತು. ಸದರಿ ಯೋಜನೆಗಳ ಪರಿಪಕ್ವ ಹಾಗೂ ತಾಂತ್ರಿಕ ಕಾರ್ಯಸಿಂಧುತ್ವವನ್ನು ಪರಿಗಣಿಸಿ ಇಲಾಖೆಯಲ್ಲಿ ಪರಿಣಿತ ಅಭಿಯಂತರರುಗಳ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಯ ಯಶಸ್ವಿ ಅನುಷ್ಠಾನಕ್ಕಾಗಿ ಮೆ॥ ಆರ್ವಿ ಅಸೋಸಿಯೇಟ್ಸ್, ರಾಹುಲ ರೆಸಿಡೆನ್ಸಿ, ಶ್ರೀನಗರ ಕಾಲೋನಿ ಮುಖ್ಯ ರಸ್ತೆ, ಹೈದ್ರಾಬಾದ್‌ರವರ ಜೊತೆ ದಿನಾಂಕ:11.11.2014ರಂದು PMCಯ ಮೊತ್ತ ರೂ.7.78ಕೋಟಿಗಳಿಗೆ ಕರಾರು ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಮುಂದುವರೆಯುತ್ತಾ ಕಾಮಗಾರಿಯ ಅನುಷ್ಠಾನದಲ್ಲಿ ಅರಣ್ಯ ಇಲಾಖೆಯ ಭೂಮಿಯನ್ನು ಸದರಿ ಕಾಮಗಾರಿಗೆ ಬಳಸಿಕೊಳ್ಳುವ ದಿಸೆಯಲ್ಲಿ ಅರಣ್ಯ ಇಲಾಖೆಯಿಂದ ಹಾಗೂ ರೈಲ್ವೆ ಕ್ರಾಸಿಂಗ್ ಬಳಿ ಕಾಮಗಾರಿ ಅನುಷ್ಠಾನಗೊಳಿಸಲು ರೈಲ್ವೆ ಇಲಾಖೆಯ ಅನುಮತಿ ಪಡೆಯುವಲ್ಲಿ ವಿಳಂಬವಾಗಿರುತ್ತದೆ. ಸಕಾಲದಲ್ಲಿ ಆಯವ್ಯಯದಲ್ಲಿ ಅನುದಾನ ಒದಗಿಸುವಲ್ಲಿ ಆಗಿರುವ ವಿಳಂಬದಿಂದ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದೇ ಇರುತ್ತದೆ. ಮೂಲ ಕಾಮಗಾರಿಯನ್ನು ವಿಸ್ತರಣಾ ಅವಧಿಯಲ್ಲಿ ಅನುಷ್ಠಾನಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಮೆ॥ ಆರ್ವಿ ಅಸೋಸಿಯೇಟ್ಸ್‌ರವರು ತಮ್ಮ PMC ಅವಧಿಯನ್ನು ದಿನಾಂಕ:01.06.2016 ರಿಂದ 31.03.2017ರವರೆಗೆ ಕಾಲಾವಧಿ ವಿಸ್ತರಣೆ ಮಾಡಲು ಕೋರಿರುತ್ತಾರೆ (ಒಟ್ಟಾರೆ 10 ತಿಂಗಳ ಹೆಚ್ಚುವರಿ ಕಾಲಾವಧಿ). PMCಯ ಮೂಲ ಗುತ್ತಿಗೆ ಕರಾರಿನ ಮೊತ್ತ ರೂ.778.00ಲಕ್ಷ ವಿಸ್ತರಣೆಗೆ ಅನುಮತಿ ಕೊಟ್ಟಲ್ಲಿ ಸರ್ಕಾರಕ್ಕೆ ತಗಲಬಹುದಾದ ಹೆಚ್ಚುವರಿ ಮೊತ್ತ ರೂ.228.811ಲಕ್ಷ. ಸದರಿ ಪ್ರಕ್ರಿಯೆಯಿಂದ ಕಾಮಗಾರಿಗಳ ಅನುಷ್ಠಾನಕ್ಕೆ ತಗಲುವ ವೆಚ್ಚ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ಕ್ರ ಸಂ | ಕಾಮಗಾರಿ ವಿವರ | ಮೂಲ ಕಾಮಗಾರಿ ಮೊತ್ತ | PMC ಮೊತ್ತ | ಕಾಲಾವಧಿ ವಿಸ್ತರಣೆಯಿಂದ PMC ಮೊತ್ತದಲ್ಲಿನ ಹೆಚ್ಚಳ | ಒಟ್ಟು ವೆಚ್ಚ (ಸೇವಾ ತೆರಿಗೆ ವೆಚ್ಚಗಳನ್ನು ಹೊರತುಪಡಿಸಿ) | ಮೂಲ ಅಂದಾಜು ಮೊತ್ತಕ್ಕೆ PMC ಯ ಹೆಚ್ಚುವರಿ ಮೊತ್ತವನ್ನು ಹೋಲಿಸಿದಾಗ ಹೆಚ್ಚಾಗಿ ವೆಚ್ಚವಾಗುವ ಶೇಖಡಾವಾರು | ಮೂಲ PMC ಯ ಮೊತ್ತಕ್ಕೆ ಹೆಚ್ಚುವರಿ PMCಯ ಮೊತ್ತವನ್ನು ಹೋಲಿಸಿದಾಗ ಹೆಚ್ಚಾಗಿ ವೆಚ್ಚವಾಗುವ ಶೇಖಡಾವಾರು |
|---|---|---|---|---|---|---|---|
| 1 | ಚಾಮರಾಜನಗರ ತಾಲ್ಲೂಕಿನ 166 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ. | ರೂ.292.80 | ರೂ.7.78 | ರೂ.2.2881 | ರೂ.507.86 | 0.459% | 29.41% |
| 2 | ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ. | ರೂ.205.00 | | | | | |

KTPP ಕಾಯ್ದೆ ಪ್ರಕಾರ **PMCಯ** ಗುತ್ತಿಗೆಯನ್ನು ಟೆಂಡರ್ ಕರೆದು ಯಶಸ್ವಿ ಗುತ್ತಿಗೆದಾರರಿಗೆ ವಹಿಸಬೇಕಾಗಿರುತ್ತದೆ. ಆದರೆ ಸದರಿ ಕಾಮಗಾರಿಯು ಈಗಾಗಲೇ ಶೇ.70%ರಷ್ಟು ಅನುಷ್ಠಾನವಾಗಿದ್ದು, ಸದರಿ ಕಾಮಗಾರಿಯ ಅನುಷ್ಠಾನವನ್ನು ಮೆ॥ ಆರ್ವಿ ಅಸೋಸಿಯೇಟ್ಸ್‌ರವರು ಯಶಸ್ವಿಯಾಗಿ ನಿರ್ವಹಿಸಿದ್ದು, ಕಾಮಗಾರಿಯಲ್ಲಿನ ಗುಣಮಟ್ಟ ಹಾಗೂ ಹೊಂದಾಣಿಕೆಯ ಭಾಗವನ್ನು ಸದರಿಯರವರಿಂದಲೇ ನಿರ್ವಹಿಸುವುದು ಉತ್ತಮ ಎಂದು ಮುಖ್ಯ ಇಂಜಿನಿಯರ್‌ರವರ ಅಭಿಪ್ರಾಯಪಟ್ಟಿರುತ್ತಾರೆ.

ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ತನ್ನ ಅಭಿಪ್ರಾಯವನ್ನು ಮೇಲೆ (7)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ತಿಳಿಸುತ್ತಾ ಪ್ರಸ್ತಾವನೆಯನ್ನು KTPP ಕಾಯ್ದೆ 4(ಸಿ)ಯಡಿಯಲ್ಲಿ ಪರಿಶೀಲಿಸಿ, ಕ್ರಮವಹಿಸುಂತೆ ತಿಳಿಸಿರುತ್ತಾರೆ. KTPP ಕಾಯ್ದೆ 4(ಸಿ) ಈ ಕೆಳಕಂಡಂತಿರುತ್ತದೆ.

Where procuring entity having procured goods, Services or technology from a supplier or contractor determines that additional supplier must be procured from the same supplier or contractor for reason of standardization and compatibility with the existing goods services or technology.

ಮುಖ್ಯ ಇಂಜಿನಿಯರ್‌ರವರು ಮೆ॥ ಆರ್ವಿ ಅಸೋಸಿಯೇಟ್ಸ್‌ರವರ **PMCಯ** ಸೇವೆಯನ್ನು ಮುಂದುವರೆಸಲು ಮೇಲೆ (6)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಬರಪೀಡಿತ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರನ್ನು ಮಾರ್ಚ್ 2017ರೊಳಗೆ ಒದಗಿಸಲು ಸಹಾಯವಾಗುವಂತೆ ಮೆ॥ ಆರ್ವಿ ಅಸೋಸಿಯೇಟ್ಸ್‌ರವರ **PMCಯ** ಸೇವೆಯನ್ನು ಮಾರ್ಚ್ 2017ರ ಅಂತ್ಯದ ವೇಳೆಯವರೆಗೆ ವಿಸ್ತರಿಸಬೇಕಾಗಿದ್ದು, ಆದ್ದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 80 ಗ್ರಾನೀಸ(5) 2016, ಬೆಂಗಳೂರು, ದಿನಾಂಕ:12.12.2016.</u>**

ಪೀಠಿಕೆಯಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ, ಪ್ರಸ್ತುತ ಬರಪೀಡಿತವೆಂದು ಘೋಷಿಸಲಾದ ಚಾಮರಾಜನಗರ ತಾಲ್ಲೂಕಿನ 166 ಗ್ರಾಮಗಳಿಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳಿಗೆ ಬಹುಗ್ರಾಮ ಕಡಿಯುವ ನೀರಿನ ಯೋಜನೆಯಡಿ ಶುದ್ಧ ಕುಡಿಯುವ ನೀರನ್ನು ಶಾಶ್ವತವಾಗಿ ಒದಗಿಸುವ ಸಲುವಾಗಿ ಮೇ॥ ಆರ್ವಿ ಅಸೋಸಿಯೇಟ್ಸ್, ಹೈದ್ರಾಬಾದ್‌ರವರ ಗುತ್ತಿಗೆ ಕರಾರಿನ ಕಾಲಾವಧಿಯನ್ನು ದಿನಾಂಕ:01.06.2016 ರಿಂದ 31.03.2017ರವರೆಗೆ ವಿಸ್ತರಿಸಲು ಸರ್ಕಾರವು ಹರ್ಷಿಸುತ್ತಿದೆ.

2. ಕಾಲಾವಧಿ ವಿಸ್ತರಣೆಯಿಂದ PMC ಮೊತ್ತದಲ್ಲಾಗುವ ಹೆಚ್ಚುವರಿ ಮೊತ್ತ ರೂ.228.811ಲಕ್ಷಗಳನ್ನು ಮೀರದಂತೆ ಎಚ್ಚರವಹಿಸತಕ್ಕದ್ದು.

3. ಸದರಿ ಅದೇಶವನ್ನು **ಆರ್ಥಿಕ ಇಲಾಖೆ ಟಿಪ್ಪಣಿ ಸಂ**: FD 921 Exp-12/2016, ದಿನಾಂಕ:10.11.2016ರಲ್ಲಿ ಸೂಚಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ ಬೆಂ.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ ವಿಧಾನಸೌಧ ಬೆಂಗಳೂರು.
9. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕಾವೇರಿಭವನ, ಬೆಂಗಳೂರು.
12. ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಚಾಮರಾಜನಗರ.
13. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ.

14. ಅಧೀಕ್ಷರ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಮೈಸೂರು.
15. ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರ
16. ಕಾರ್ಯನಿರ್ವಹಣಾ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಾಮರಾಜನಗರ ಮತ್ತು ಗುಂಡ್ಲುಪೇಟೆ.
17. ಮುಖ್ಯ ಲೆಕ್ಕಾಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿ ಭವನ, ಬೆಂ.
18. Vice President & HoD – EWS Division, Ravual Residency, Srinagar Colony Main Road, Hyderbad-500082, Telangana State, India.
19. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ ಬೆಂ.
20. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಸಹಾಯಕರು.
21. ಉಪ ನಿರ್ದೇಶಕರು, Network Management Center (TNMC), ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
22. ಖಜಾನಾಧಿಕಾರಿ, ಚಾಮರಾಜನಗರ.
23. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
24. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
25. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
26. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
27. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.